

# ಅಳಿವಿನಂಚಿನಲ್ಲಿ ನರ್ತೆ



■ ಚಿತ್ರ ಬರಹ:
ಚಂದ್ರಹಾಸ ಚಾರ್ಮಾಡಿ

ನರ್ತೆಗಳನ್ನು ನೋಡಬೇಕಾದರೆ ನೀವೊಮ್ಮೆ ಕರಾವಳಿಯ ಗದ್ದೆಗಳ (ಹೊಲಗಳ) ಬಳಿ ಹೋಗಲೇಬೇಕು. ಹಿಂದಿನ ಕಾಲದಲ್ಲಿ ಗದ್ದೆ ತುಂಬಾ ಕಾಣಸಿಗುತ್ತಿದ್ದ ಈ ಮೃದುಜೀವಿ ಗದ್ದೆಯಲ್ಲಿರುವ ಕ್ರಿಮಿ ಕೀಟಗಳನ್ನು ತಿನ್ನುವ ಮೂಲಕ ಇಳುವರಿಯನ್ನು ಹೆಚ್ಚಿಸುತ್ತದೆ ಎಂಬ ಕಾರಣಕ್ಕಾಗಿ ಹಿಂದಿನ ಕಾಲದಲ್ಲಿ ಇವನ್ನು ಗದ್ದೆಯಲ್ಲಿ ಬಿಟ್ಟು ಸಾಕುತ್ತಿದ್ದರು. ಆದರೆ ರಾಸಾಯನಿಕದ ಬಳಕೆ ಹೆಚ್ಚಿದಂತೆ ನರ್ತೆಗಳು ಹೇಳಹೆಸರಿಲ್ಲದಂತಾದುವು.

ಕೇವಲ ಕೊಟ್ಟಿಗೆ ಗೊಬ್ಬರವನ್ನುಂಡು ಕೈತುಂಬಾ ಇಳುವರಿಯನ್ನು ನೀಡುವ ಬೆರಳೆಣಿಕೆಯಷ್ಟು ಗದ್ದೆಗಳು ಇಂದಿಗೂ ಕರಾವಳಿಯ ಹಳ್ಳಿಗಳಲ್ಲಿವೆ. ಇಂತಹ ಗದ್ದೆಗಳ ಬಳಿ ಇವು ಇಂದಿಗೂ ಕಾಣಸಿಗುತ್ತವೆ. ರಾತ್ರಿಯಾದೊಡನೆ ಕೆಸರಿನೊಳಗೆ ಸೇರಿ ಕಣ್ಮರೆಯಾಗುವ ನರ್ತೆಗಳು ಬಿಸಿಲು ಬೀಳುತ್ತಿದ್ದಂತೆಯೇ ಗದ್ದೆಯ ಮೇಲ್ಭಾಗದಲ್ಲಿ ಕಾಣ ಸಿಗುತ್ತವೆ. ಗದ್ದೆಯಲ್ಲಿರುವ ಪಾಚಿ ಇವುಗಳ ಇಷ್ಟದ ಆಹಾರ. ಗದ್ದೆಗಳಲ್ಲಿ ಇವುಗಳು ಆಹಾರವನ್ನು ಹುಡುಕುವುದು, ಕಚ್ಚಾಡುವುದನ್ನು ನೋಡುವುದೇ ಚಂದ.

ಇವುಗಳ ದೇಹದ ಮೇಲ್ಭಾಗದಲ್ಲಿ ದಪ್ಪದಾದ ಕವಚವಿದ್ದು ಮಳೆ, ಚಳಿಯಿಂದ ಇವುಗಳನ್ನು ರಕ್ಷಿಸುತ್ತದೆ. ಮುಖದ ತುದಿಯಲ್ಲಿ ಅಡ್ಡ ಕವಚವಿದ್ದು ಅದು ಬಾಯಿಯ ಮೇಲ್ಭಾಗಕ್ಕೆ ಅಂಟಿಕೊಂಡಂತಿದೆ. ಹದಿನೈದರಿಂದ ಇಪ್ಪತ್ತು ಗ್ರಾಂ ತೂಗುವ ಇವು ಗದ್ದೆಯಲ್ಲಿ ಕಾಣಸಿಗುವ ಗುಳ್ಳಕ್ಕಿಂತ ದೊಡ್ಡದು. ನೀರಿನಿಂದ ಹೊರ ತೆಗೆದರೂ ನಾಲ್ಕರಿಂದ ಆರು ದಿನಗಳ ಕಾಲ ಇವು ಬದುಕಬಲ್ಲವು. ಮುಟ್ಟಿದೊಡನೆ ಮುದುಡಿಕೊಳ್ಳುವ ನರ್ತೆಯನ್ನು ಹಳ್ಳಿಮಂದಿ ಸಾರಿಗೂ ಬಳಸುತ್ತಾರೆ. ಬೆನ್ನು ನೋವು, ಮೂಲವ್ಯಾಧಿಗೆ ಇದು ಸಿದ್ಧೌಷಧ ಕೂಡಾ. ಅಳಿವಿನ ಅಂಚಿನಲ್ಲಿರುವ ಈ ಪರೋಪಕಾರಿ ಮೃದುಜೀವಿಯ ರಕ್ಷಣೆಗೆ ಕೃಷಿಕರು ಕ್ರಮ ಕೈಗೊಳ್ಳಬೇಕಿದೆ.